## ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ನ್ಯಾಯಾಲಯ, ಹುಬ್ಬಳ್ಳಿ

**ಸಿಸಿ ನಂಃ 1823 ಃ 2015**

ಪಿಡಬ್ಲೂಃ 2
ಸಿಡ್ಲೂ ಃ 2

ಸಾಕ್ಷಿಯ ಹೆಸರು : ಬಸವರಾಜ
ತಂದೆಯ ಹೆಸರು : ಗೋವಿಂದಪ್ಪಾ ಜಾನವರಿ
ವಯಸ್ಸು : 34 ವರ್ಷ
ಉದ್ಯೋಗ : ಸರ್ವಿಸ್ ಮ್ಯಾನೇಜರ, ಹುಂಡೈ ಶೋರೂಮ
ವಾಸ ಸ್ಥಳ : ಹುಬ್ಬಳ್ಳಿ

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಿದ ದಿನಾಂಕಃ **18-12-2015**

ಮುಖ್ಯ ವಿಚಾರಣೆ ಎಪಿಪಿ ಯವರಿಂದಃ

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಸಾಕ್ಷಿಯು ಅದರ ಮೇಲಿದ್ದ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ದಾಖಲೆ ಸ್ಥಳ ಮಹಜರಾಗಿದ್ದು ಅದನ್ನು ನಿಶಾನೆ ಪಿ–6 ಅಂತಾ, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–6ಎ ಅಂತಾ ಗುರುತಿಸಲಾಯಿತು. ಸದರಿ ಸಹಿಯನ್ನು ಹುಬ್ಬಳ್ಳಿಯ ವಿಆರ್‌ಎಲ್ ಆಫೀಸ್‌ನ ಎದರುಗಡೆ ದಿನಾಂಕಃ 28–8–2014 ರಂದು ರಾತ್ರಿ 10.45 ಗಂಟೆಗೆ ವಿಆರ್‌ಎಲ್ ಬಸ್ ನೊಂದಣಿ ಸಂಖ್ಯೆ ಕೆಎ–25ಸಿ–7744 ಅಂದಾಜು ಇರಬಹುದು, ಸದರಿ ಬಸನ್ನು ತಪಾಸಣೆ ಮಾಡಿದರು. ಸದರಿ ಬಸ್‌ನಲ್ಲಿ ಕಳುವಾಗಿದ್ದು ಆ ಸಂದರ್ಭದಲ್ಲಿ ನನ್ನ ಜೊತೆ ಚಾಸಾ–3 ಕೂಡಾ ಇದ್ದರು. ನಾವಿಬ್ಬರು ಸ್ಥಳದಲ್ಲಿ ನಿಶಾನೆ ಪಿ–6 ಕ್ಕೆ ಸಹಿ ಹಾಕಿರುತ್ತೇವೆ.

ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ

3. ಚಾಸಾ–1 ನಮ್ಮ ಕಚೇರಿಯಲ್ಲಿ ಅಕೌಂಟಂಟ ಅಂತಾ ಕೆಲಸ ಮಾಡುತ್ತಿದ್ದು ಅವರ ಪರಿಚಯ ಇರುತ್ತದೆ. ಮೇಲೆ ಹೇಳಿದ ದಿನಾಂಕದಂದು ರಾತ್ರಿ 10 ವರೆ ಗಂಟೆ ಸಮಯದಲ್ಲಿ ನಾನು ನನ್ನ ಮನೆಯಲ್ಲಿದ್ದಾಗ ಚಾಸಾ–1 ಘಟನಾ ಸ್ಥಳಕ್ಕೆ ಬರ ಹೇಳಿದ್ದರು. ತಕ್ಷಣ ನಾನು 10ವರೆಗೆ ನಾನು ಸ್ಥಳಕ್ಕೆ ಬಂದಿದ್ದೆ . 11 ಗಂಟೆವರೆಗೆ ಸ್ಥಳದಲ್ಲಿ ಇದ್ದೆ . ನಾನು ಮಹಜರಕ್ಕೆ ಸಹಿ ಮಾಡಿದ ಸ್ಥಳ ವಿಆರ್‌ಎಲ್ ಕಚೇರಿಯಿಂದ 10 ಮೀಟರ ಅಂತರ ಇತ್ತು. ಅಲ್ಲಿ ಜನರು ಇದ್ದರು. ನಿಶಾನೆ ಪಿ–6ನ್ನು ಬರೆದು ಮುಗಿಸಿದ ನಂತರ ನಾನು ಸಹಿ ಹಾಕಿದ್ದು ಅದನ್ನು ಬರೆಯಲು ನಾನೇನು ಮಾಹಿತಿ ನೀಡಿಲ್ಲ. ಚಾಸಾ–1 ರ ಕೋರಿಕೆ ಮೇರೆಗೆ ನಾನು

ನಿಶಾನೆ ಪಿ–6 ರಲ್ಲಿ ಸಹಿ ಹಾಕಿರುತ್ತೇನೆ ಎಂದರೆ ಸರಿ. ಅದರಂತೆ ಚಾಸಾ–3 ಕೂಡಾ ನನ್ನ ಜೊತೆಯಲ್ಲಿ ಸ್ಥಳಕ್ಕೆ ಬಂದು ಹಾಜರಿದ್ದರು.

4. ಚಾಸಾ–1 ನನ್ನನ್ನು ಹಾಗೂ ಚಾಸಾ–3 ರವನ್ನು ಪೊಲೀಸ ಠಾಣೆಗೆ ಕರೆಯಿಸಿದ್ದರು ಎಂದರೆ ಸರಿಯಲ್ಲ. ಆ ನಂತರ ನಾವು ಠಾಣೆಗೆ ಹೋಗಿದ್ದೇವು. ನಿಶಾನೆ ಪಿ–6 ಕ್ಕೆ ನಾವು ಪೊಲೀಸ ಠಾಣೆಯಲ್ಲಿ ಸಹಿ ಹಾಕಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು )

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಹುಬ್ಬಳ್ಳಿ.